Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 38/2018

ಪ್ರಾ.ಸಾ. 6 ಚಾ.ಸಾ 8

| | | |
|---|---|---|
| ಹೆಸರು | : | ಮಶಮ್ಮ |
| ಗಂಡನ ಹೆಸರು | : | ಸೈದಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಗಾರೆ ಕೆಲಸ |
| ವಾಸ | : | ಹೊನಗೇರಾ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 09-09-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಮೃತ ತಿಮ್ಮಪ್ಪ ನನ್ನ ಅಣ್ಣನಾಗಿರುತ್ತಾನೆ. ಚಾಸಾ-1 ನನ್ನ ಮಾವನಾಗಿರುತ್ತಾನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಈಗೆ ಸುಮಾರು 7 ವರ್ಷಗಳ ಹಿಂದೆ ಬಳಿಚಕ್ರ ಗ್ರಾಮದಲ್ಲಿ ರಾತ್ರಿ 10.00 – 10.30 ರವೆರೆಗೆ ಒಬ್ಬರಿಗೊಬ್ಬರು ಮಜಾಕ ಮಾಡುತ್ತಾ ಇದ್ದಾಗ ಆರೋಪಿತರು ಇಬ್ಬರು ಸೇರಿ ನನ್ನ ಅಣ್ಣ ತಿಮ್ಮಪ್ಪನನ್ನು ದಬ್ಬಿರುತ್ತಾರೆ ಆತ ಕೆಳಗೆ ಬಿದ್ದಿರುತ್ತಾನೆ, ಆಗ ತಲೆಗೆ ಪೆಟ್ಟಾಗಿರುತ್ತದೆ ನ್ಯಾಯಾಲಯದ ಮುಂದೆ ಇರುವ ಆರೋಪಿತರು ದೊಬ್ಬಿರುತ್ತಾರೆ. ಸಿ.ಸಿ ರೋಡಿನಲ್ಲಿ ಬಿದ್ದಿರುತ್ತಾರೆ ಅದರ ಪರಿಣಾಮ ನನ್ನ ಸಹೋದರನ ಸಾವಿಗೆ ಆರೋಪಿತರು ಕಾರಣರಾಗಿರುತ್ತಾರೆ ಎಂದು ಚಾಸಾ-6 ನನಗೆ ತಿಳಿಸಿರುತ್ತಾರೆ. ಸಾಕ್ಷಿದಾರರು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಜಿ.ಬಿ.ಆರ್. ವಕೀಲರಿಂದ

1. ಮೃತ ವ್ಯಕ್ತಿ ನನ್ನ ಅಣ್ಣನಾಗಿದ್ದನು. ನನ್ನ ಮದುವೆ ಸುಮಾರು 25 ವರ್ಷಗಳಿಂದ ಆಗಿರುತ್ತದೆ. ಮದುವೆ ಆಗಿದ್ದಾಗಿಂದ ನಾನು ನನ್ನ ಗಂಡನ

ಮನೆಯಲ್ಲಿ ಇರುತ್ತೇನೆ ಎಂದರೆ ಸರಿ. ನಾನು ನನ್ನ ಗಂಡ ಬದುಕಲು ಈಗ ಬೆಂಗಳೂರಿನಲ್ಲಿ ಇರುತ್ತೇವೆ ಎಂದರೆ ಸರಿ. ಸದರಿ ಘಟನೆ ದಿನದಂದು ನನ್ನ ನಮ್ಮ ಊರಿನಲ್ಲಿ ಇರಲಿಲ್ಲ ಎಂದರೆ ಸರಿ. ಸದರಿ ಘಟನೆ ಚಾಸಾ-6 ಹೇಳಿದ ಮೇರೆಗೆ ನನಗೆ ಗೊತ್ತಾಯಿತು ಎಂದರೆ ಸರಿ. ನನ್ನ ತಂದೆಯ ತಾಯಿ ಹೆಸರು ಮಶಮ್ಮ ಎಂದು ಇರುತ್ತದೆ. ನಮ್ಮ ಅಜ್ಜ ಗೋವಿಂದಪ್ಪನಿಗೆ ಇಬ್ಬರು ಹೆಂಡರು ಎಂದರೆ ಮಶಮ್ಮ ಮತ್ತು ಮಲ್ಲಮ್ಮ ಎಂದು ಇದ್ದರು. ಮಶಮ್ಮನಿಗೆ ನನ್ನ ತಂದೆ ಚಾಸಾ-1 ಒಬ್ಬರೇ ಮಗನಾಗಿದ್ದರು. ಮಲ್ಲಮ್ಮನಿಗೆ ಒಬ್ಬ ಮಗಳು ಹಣಮವ್ವ ಎಂದು ಇದ್ದಳು. ಆ ಹಣಮವ್ವನ ಗಂಡನ ಹೆಸರು ನರಸಪ್ಪ ಎಂದು ಇದ್ದು, ಹಣಮವ್ವ ಗಂಡ ನರಸಪ್ಪನ ಮಗ ಭೀಮಣ್ಣ ಆಗಿರುತ್ತಾನೆ ಎಂದರೆ ಸರಿ. ಗೋವಿಂದಪ್ಪನ ಆಸ್ತಿಗಳು ಇವರೆಲ್ಲರಿಗೂ ಬರುತ್ತವೆ ಎಂದರೆ ಸರಿ. ಆರೋಪಿತರ ತಂದೆ ಭೀಮಣ್ಣ ತನ್ನ ಹೆಸರಿಗೆ ಆಸ್ತಿ ಮಾಡು ಎಂದು ಹೇಳಿದ್ದು ಅದಕ್ಕೆ ನನ್ನ ತಂದೆ ಚಾಸಾ-1 ಅವರ ಹೆಸರಿಗೆ ಮಾಡಿರುವುದಿಲ್ಲ ಎಂದರೆ ಸರಿ. ಆಸ್ತಿ ಸಂಬಂಧ ಊರಲ್ಲಿ ನ್ಯಾಯಾ ಪಂಚಾಯಿತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿತರಿಗೆ ಪಾಲು ಕೊಡಬೇಕು ಎಂಬ ಉದ್ದೇಶದಿಂದ ನಾನು, ನನ್ನ ತಂದೆ, ನನ್ನ ತಾಯಿ, ನನ್ನ ಅಣ್ಣತಮ್ಮಂದಿರು ಈ ಎಲ್ಲರು ಸೇರಿ ಆರೋಪಿತರಿಗೆ ತೊಂದರೆ ಕೊಟ್ಟು ಪಾಲು ಕೊಡುತ್ತಿಲ್ಲ ಎಂದರೆ ಸರಿಯಲ್ಲ.  ಆಸ್ತಿಗೆ ಸಂಬಂಧಿಸಿದಂತೆ ಊರಲ್ಲಿ ನ್ಯಾಯಾ ಪಂಚಾಯಿತಿ ಆಗಿರುವುದು ನನಗೆ ಗೊತ್ತಿರುವುದಿಲ್ಲ. ಚಾಸಾ-1, 6 ಮತ್ತು ನಮ್ಮ ತಾಯಿ ಹಾಗೂ ನಾನು ಎಲ್ಲರೂ ಸೇರಿ ಆರೋಪಿತರಿಗೆ ಆಸ್ತಿ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಈ ಕೇಸು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಣ್ಣ ತಿಮ್ಮಪ್ಪ ಊರಲ್ಲಿ ಮಧ್ಯ ಸೇವನೆ ಮಾಡಿ, ಸಣ್ಣಪುಟ್ಟ ಗಲಾಟೆ ಮಾಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ಅಣ್ಣ ತಿಮ್ಮಪ್ಪ ಮಧ್ಯೆ ಸೇವನೆ ಮಾಡಲು ಊರಲ್ಲಿ ಹಣ ಕೇಳಿದಾಗ, ಹಣ ಕೊಡದ್ದಿದರೆ ಅವರೊಂದಿಗೆ ಗಲಾಟೆ ಮಾಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ.  ರಾಯಚೂರು-ಲಿಂಗಸೂರಿಗೆ ಬರಲು ನಮ್ಮ ಊರಿಗೆ ಬರಲು ಸಿ.ಸಿ ರಸ್ತೆ ಇರುತ್ತದೆ ಎಂದರೆ ಸರಿ. ಆ ಸಿ.ಸಿ ರಸ್ತೆಗೆ ಎರಡು ಕಡೆ ಮೋರಿ ಇರುತ್ತವೆ ಎಂದರೆ ಸರಿ. ಆ ಚೌಕನಲ್ಲಿ ಬಸವರಾಜ ಎನ್ನುವರ ಕಿರಾಣಿ ಡಬ್ಬಿ ಇರುತ್ತದೆ ಎಂದರೆ ಸರಿ. ಆ ಡಬ್ಬಿ ಡ್ರೈನೇಜ ಮೇಲೆ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಅಣ್ಣ ಆ ಡಬ್ಬಿಯಲ್ಲಿ ಗುಟಾಕ ತೆಗೆದುಕೊಂಡು

ತುಂಬಾ ಮಧ್ಯ ಸೇವನೆ ಮಾಡಿ ಮೋರಿಯಲ್ಲಿ ಬಿದ್ದಿರುತ್ತಾನೆ ಎಂದರೆ ಸರಿಯಲ್ಲ. ಮೋರಿಯಲ್ಲಿ ಬಿದ್ದು ಪ್ರಜ್ಞೆ ತಪ್ಪಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಣ್ಣ ಮಧ್ಯ ಸೇವನೆ ಮಾಡಿ ಬಿದ್ದಿರುತ್ತಾನೆ ಎಂದು ಗೊತ್ತಿದ್ದರು ಸಹ ಆರೋಪಿತರ ಮೇಲೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಕೇಳಿ ವಿಚಾರ ಮಾಡಿರುವುದಿಲ್ಲ. 1 ನೇ ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. 2 ನೇ ಆರೋಪಿ ನಾಗಲಾಪೂರಕ್ಕೆ ಮನೆ ಅಳಿಯನಾಗಿ ಹೋಗಿರುತ್ತಾನೆ ಎಂದರೆ ಸರಿ. ಆ ಸ್ಥಳದಲ್ಲಿ ಆರೋಪಿತರು ಇಬ್ಬರು ಇದ್ದರು ಎಂಬ ವಿಚಾರ ಚಾಸಾ-6 ರವರ ಸುಳ್ಳು ಹೇಳಿರುತ್ತಾರೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.